**<u>ಸಾಕ್ಷಿಗೆ ದಿನಾಂಕ 19.02.2026 ರಂದು ಪ್ರಮಾಣ ವಚನ ನೀಡಲಾಯಿತು.</u>**

**<u>ಪಾಟೀಸವಾಲುಃ ಪ್ರತಿವಾದಿ ಪರ ವಕೀಲರಿಂದಃ</u>**

ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಬರೆಯಲು ನಾನು ಮಾಹಿತಿ ನೀಡಿರುತ್ತೇನೆ. ಸರ್ವೆ ನಂಬರ 43/1, 1 ಎಕರೆ 17 ಗುಂಟೆ, 85/2, 1 ಎಕರೆ 26 ಗುಂಟೆ, 2/4, 1 ಎಕರೆ 31 ಗುಂಟೆ ಜಮೀನಿಗೆ ದಾವೆ ಸಲ್ಲಿಸಿರುತ್ತಾರೆ. ಸಾಕ್ಷಿ ಕೆಲವೊಂದು ಜಮೀನುಗಳನ್ನು ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಜಮೀನು ಮಾರಾಟ ಮಾಡಿದ ಬಗ್ಗೆ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಹೇಳಿ ಬರೆಸಿಲ್ಲ. ಮಾರಾಟ ಮಾಡಿದ ಜಮೀನುಗಳು ಪುಟ್ಟಸ್ವಾಮಾಚಾರಿ, ನಂಜುಂಡಸ್ವಾಮಿ ಮತ್ತು ನಾಗರಾಜಚಾರಿರವರಿಗೆ ಸೇರಿದ ಜಮೀನುಗಳು ಆಗಿರುತ್ತವೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲ ದಾವಾ ಜಮೀನಿನ ಸರ್ವೆ ನಂಬರ ಹಾಗೂ ವಿಸ್ತೀರ್ಣ ನಮೂದು ಮಾಡಿಲ್ಲ. ದಾವಾ ಜಮೀನುಗಳು ನನ್ನ ಜಮೀನಿನ ಪಕ್ಕದಲ್ಲಿರುವುದರಿಂದ ಸರ್ವೆ ನಂಬರ ಹಾಗೂ ವಿಸ್ತೀರ್ಣ ಗೊತ್ತಿರುತ್ತದೆ. ನಾನು ಚಾಮುಂಡೇಶ್ವರಿ ನಗರ, ಬೆಳವಾಡಿ ಗ್ರಾಮ ವಾಸ ಎಂದು ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆಸಿರುತ್ತೇನೆ ಎಂದರೆ ಸರಿ. ಸಾಕ್ಷಿ ನಾನು ಜೀನಹಳ್ಳಿಯಲ್ಲಿ ಮೊದಲು ವಾಸವಿದ್ದೇನು ಎಂದು ನುಡಿಯುತ್ತಾರೆ. ಕಳೆದ 30 ವರ್ಷದಿಂದ ಚಾಮುಂಡೇಶ್ವರಿ ನಗರ, ಬೆಳವಾಡಿ ಗ್ರಾಮ ವಾಸವಿದ್ದೇನೆ. ವಾದಿ ನನಗೆ ತುಂಬಾ ಆತ್ಮೀಯರು ಎಂದರೆ ಸರಿಯಲ್ಲ ಪರಿಚಯಸ್ಥರು. ವಾದಿಗೆ ಸಹಾಯವಾಗಲೆಂದು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.**

**ಓ.ಹೇ.ಕೇ.ಸರಿ ಇದೆ**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಧೀಶರು, ಹುಣಸೂರು.**